ದಿನಾಂಕ: 13-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಡಿ.ಬಿ.ಎ. ಪ್ರತಿವಾದಿ ಪರ ವಕೀಲರಿಂದಃ**

8. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ಅವು ಯಾವ ದಾಖಲೆಗಳು ಎಂದು ನನಗೆ ನೆನಪಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಅವು 3ನೇ ಪ್ರತಿವಾದಿ ತಮ್ಮ ಸ್ವಂತ ಆದಾಯದಿಂದ ಗಳಿಸಿದ ಆಸ್ತಿ ಮತ್ತು 4ನೇ ಪ್ರತಿವಾದಿಗೆ ಅವರ ತಂದೆಯಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಾವು ಸಾಗು ಮಾಡುತ್ತೇವೆ ಎಂದು ತೋರಿಸಲು ದಾಖಲೆಗಳ ಬಗ್ಗೆ ನನ್ನ ಅಣ್ಣನಿಗೆ ಗೊತ್ತು.

9. 3ನೇ ಪ್ರತಿವಾದಿಗೆ ಸುನೀಲ ಎಂಬ ಇನ್ನೊಬ್ಬ ಮಗ ಇದ್ದಾನೆ ಎಂದರೆ ಸರಿ. ಸದರಿಯವರು ಬಿಲಕುಂದಿಯಲ್ಲಿ ವಾಸ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸುನೀಲ ಇವರು ಪಾಲು ಕೋರಿ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಓ.ಎಸ್.ನಂ.283/2017ರಲ್ಲಿ ಒಂದು ದಾವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಆದ ಆದೇಶದ ಪ್ರಕಾರ ಸುನೀಲ ಇವರಿಗೆ ಅರ್ಧ ಹಿಸ್ಸೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿದಾರರು ತಾವು ಈ ದಾವೆ ಹೂಡಿದಾಗ ಆಸ್ತಿಗಳೆಲ್ಲವೂ ತಮ್ಮ ಮಾವ 3ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದವು ಎಂದು ಹೇಳುತ್ತಾರೆ.

10. ಸರ್ವೆ ನಂ.256/2 ಮತ್ತು 257/2ಕ್ಕೆ ದಿನಾಂಕ 24/05/2022 ರಂದು ಎಂ.ಆರ್.ನಂ.45/2021-22 ರ ಪ್ರಕಾರ ಸುನೀಲ ಇವರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

11. ರಮೇಶ ಶಂಕರ ಸವದತ್ತಿ, ಶ್ರೀಶೈಲ ಶಂಕರ ಸವದತ್ತಿ, ನನ್ನ ಅಣ್ಣಂದಿರು, ಮಹಾದೇವಿ ಶಂಕರ ಸವದತ್ತಿ ನನ್ನ ತಾಯಿ. ಚನ್ನಬಸಪ್ಪ ರಾಮಪ್ಪ ಸವದತ್ತಿ ನನ್ನ ದೊಡ್ಡಪ್ಪ, ಯಲ್ಲವ್ವ ಚನ್ನಬಸಪ್ಪ ಸವದತ್ತಿ ನನ್ನ ದೊಡ್ಡಮ್ಮ. ಸವದತ್ತಿ ಕುಟುಂಬ ಬಿಲಕುಂದಿಯಲ್ಲಿ ದೊಡ್ಡ ಕುಟುಂಬ ಎಂದರೆ ಸರಿ. ನನ್ನ ತಂದೆ ಮೃತಪಟ್ಟಿರುತ್ತಾರೆ.

12. 3ನೇ ಪ್ರತಿವಾದಿಗೆ ಹೊಡೆದು ಬಡೆದು ಸರ್ವೆ ನಂ.15 ರ 03ಎ-32ಗು ಜಮೀನಿನ ಕಬ್ಜೆ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯ 1 ಮತ್ತು 2ನೇ ಪ್ರತಿವಾದಿ ಸರ್ವೆ ನಂ.15 ರ 3ಎ-32ಗು ಕಬ್ಜೆ ಪಡೆಯುವುದಕ್ಕಾಗಿ 1ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯದಲ್ಲಿ ಓ.ಎಸ್.ನಂ.620/2025ರಲ್ಲಿ ನನ್ನ ಹಾಗೂ ನನ್ನ ಅಣ್ಣನ ಮೇಲೆ ಒಂದು ದಾವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

13. ಹಡಗಿನಾಳ ಕುಟುಂಬ ಒಂದು ಸಭ್ಯ ಹಾಗೂ ಸುಸಂಸ್ಕೃತ ಕುಟುಂಬ ಎಂದರೆ ಸರಿಯಲ್ಲ. ನಮ್ಮೂರ ಜಾತ್ರೆಯಲ್ಲಿ 3ನೇ ಪ್ರತಿವಾದಿಯನ್ನು ಕಂಬಕ್ಕೆ ಕಟ್ಟಿ ಹೊಡೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ-5ಕ್ಕೆ ನಾನೇ ಮಾಹಿತಿಯನ್ನು

ಕೊಟ್ಟಿರುತ್ತೇನೆ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ 1ನೇ ವಾದಿಯ ತಂದೆಯ ಹೆಸರು ಮಲ್ಲಿಕಾರ್ಜುನ ಎಂದು ತಪ್ಪು ಮಾಹಿತಿ ಕೊಟ್ಟು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-5ರಲ್ಲಿ 1ನೇ ವಾದಿಯ ತಂದೆಯ ಹೆಸರು ಮಲ್ಲಿಕಾರ್ಜುನ ಎಂದು ಬರೆದಿದ್ದರ ದುರುಪಯೋಗ ಪಡೆದುಕೊಂಡು 1ನೇ ವಾದಿಯ ಸುಳ್ಳು ಆಧಾರ ಕಾರ್ಡ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಧಾರ ಕಾರ್ಡ ಹಾಜರ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

14. ನಮ್ಮ ಜಾತಿ ರಿವಾಜಿನ ಪ್ರಕಾರ ಮದುವೆಯಲ್ಲಿ ಅರಿಶಿನಶಾಸ್ತ್ರ, ಎಲ್ಲರ ಹಿರಿಯರ ಸಮ್ಮುಖದಲ್ಲಿ ತಾಳಿ ಕಟ್ಟಿಸುವುದು, ಹಿರಿಯರ ಆಶಿರ್ವಾದ ತೆಗೆದುಕೊಳ್ಳುವುದು ಮಾಡುತ್ತಾರೆ. ನಾವು ಜಾತಿಯಿಂದ ಹಿಂದೂ ಉಪ್ಪಾರ ಇರುತ್ತೇವೆ. ನಮ್ಮ ಮದುವೆಗೆ ಪುರೋಹಿತರು ಇದ್ದರು. ಆ ಪುರೋಹಿತರು ಸ್ವಾಮಿಗಳು ಅಥವಾ ಭಟ್ಟಜಿ ಇದ್ದರು ನಾನು ನೋಡಿಲ್ಲ. ಉಪ್ಪಾರ ಜನಾಂಗದಲ್ಲಿ ಭಟ್ಟಜಿ ಮದುವೆ ಕಾರ್ಯಕ್ರಮ ನೆರವೇರಿಸಿಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

15. ನನ್ನ ಮದುವೆ ದಿಃ 04/05/2018 ರಂದು ಆಗಿರುತ್ತದೆ. ನನ್ನ ಮದುವೆ ದೊಡ್ಡವಾಡದಲ್ಲಿ ಆಗಿದೆ. ಯಾವ ದೇವಸ್ಥಾನದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮದುವೆಗೆ ನನ್ನ ತಂದೆ, ತಾಯಿ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಅಜ್ಜ, ಅಜ್ಜಿ ಹಾಗೂ ನಮ್ಮ ಕಡೆಯ ಹಿರಿಯರು ಬಂದಿದ್ದರು. ಈ ಮದುವೆಗೆ 1ನೇ ಪ್ರತಿವಾದಿ ಕಡೆಯಿಂದ ಅವರ ತಂದೆ ತಾಯಿ, ಸಹೋದರ ಇದ್ದರು. ಅವರನ್ನು ಹೊರತುಪಡಿಸಿ ಪಾಟೀಲ ಎನ್ನುವವರು ಬಂದಿದ್ದರು ಮತ್ತೆ

ಬೇರೆ ಯಾರು ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ದೊಡ್ಡವಾಡ ಗ್ರಾಮವು ಅಥಣಿ ತಾಲೂಕಿನಲ್ಲಿ ಬರುತ್ತದೆ.

16. ನಮ್ಮ ಮದುವೆ ಕಾರ್ಯಕ್ರಮದಲ್ಲಿ ಸುರ್ಗಿ ಸುತ್ತಿರುತ್ತಾರೆ. 2018ರಲ್ಲಿ 1ನೇ ಪ್ರತಿವಾದಿ ಹೈದ್ರಾಬಾದನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿ 2018ರಲ್ಲಿ ದೊಡ್ಡವಾಡಕ್ಕಾಗಲಿ ಬಿಲಕುಂದಿಗಾಗಲಿ ಯಾವತ್ತೂ ಬಂದಿಲ್ಲ ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಬಸವಣ್ಣ ದೇವರ ಜಾತ್ರೆ ಬಸವ ಜಯಂತಿ ಆದ 05 ದಿನಕ್ಕೆ ನಡೆಯುತ್ತೆ, ಆ ಜಾತ್ರೆ ಆದ ನಂತರ ಮದುವೆಗಳನ್ನು ಮಾಡುತ್ತಾರೆ. ನಮ್ಮೂರಿನ ಬಸವಣ್ಣ ದೇವರ ಜಾತ್ರೆ ಮುಗಿದ ಮಾರನೇ ದಿನ ಪ್ರತಿವಾದಿ 1, 3 ಮತ್ತು 4 ನಮ್ಮ ಮನೆಗೆ ಬಂದು ನನಗೆ ಹಣ್ಣು ಹಾಕಿ ಹೋಗಿರುತ್ತಾರೆ. ನನಗೆ ಹಣ್ಣು ಹಾಕಲು ಬರುವುದಕ್ಕಿಂತ ಪೂರ್ವದಲ್ಲಿ ನಮ್ಮ ಹಿರಿಯರ ಜೊತೆ ಮೊದಲು ಮಾತುಕತೆ ಆಗಿತ್ತು ಯಾವಾಗ ಆಗಿತ್ತು ಎಂದು ನನಗೆ ನೆನಪಿಲ್ಲ.

17. ಬಿಲಕುಂದಿ ಗ್ರಾಮದಲ್ಲಿ ನಮ್ಮ ತವರು ಮನೆ ಮತ್ತು ಪ್ರತಿವಾದಿಯರ ಮನೆ ಒಂದೇ ಓಣಿಯಲ್ಲಿ ಇದೆ ಎಂದರೆ ಸರಿ. 3ನೇ ಪ್ರತಿವಾದಿ ನನ್ನ ಮದುವೆಗಿಂತ ಮೊದಲು ನಮ್ಮ ಮತ್ತು ಪ್ರತಿವಾದಿಯ ಮನೆತನಕ್ಕೆ ಇರುವ ಸಂಬಂಧದಲ್ಲಿ ನನಗೆ ಅಜ್ಜ ಆಗುತ್ತಾರೆ. ನನ್ನ ಮದುವೆಗಿಂತ ಮೊದಲು ಪ್ರತಿವಾದಿ 1, 2 ಸಂಬಂಧದಲ್ಲಿ ನನಗೆ ಮಾವ ಆಗುತ್ತಾರೆ. ನಾವು ಚಿಕ್ಕವರಿದ್ದಾಗಿನಿಂದ ನಮ್ಮ ಕುಟುಂಬಕ್ಕು ಮತ್ತು ಪ್ರತಿವಾದಿಯರ ಕುಟುಂಬಕ್ಕು ಸಂಬಂಧ

ಇದ್ದುದ್ದಕ್ಕಾಗಿ ನನ್ನ ಮತ್ತು 1ನೇ ಪ್ರತಿವಾದಿಯ ಮದುವೆ ಮಾಡುವುದಾಗಿ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಮದುವೆ ಆಗುವುದಕ್ಕಿಂತ ಮೊದಲು 1 ಮತ್ತು 2ನೇ ಪ್ರತಿವಾದಿಯನ್ನು ನಾನು ನೋಡಿಲ್ಲ. ನನ್ನ ವಾದ ಪತ್ರದಲ್ಲಿ ನನ್ನ ಮತ್ತು 1ನೇ ಪ್ರತಿವಾದಿಯ ಮದುವೆಯಲ್ಲಿ ಆದ ಕಾರ್ಯಕ್ರಮಗಳ ಬಗ್ಗೆ ವಾದ ಪತ್ರದಲ್ಲಿ ಬರೆಯಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

18. ದಾವಾ ಆಸ್ತಿಗಳ ಕಂದಾಯ ಪಾವತಿ ಮಾಡಿದ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಗಳಲ್ಲಿ ಈಗಾಗಲೇ ವಾಟ್ನಿಯಾಗಿದೆ ಆ ಪ್ರಕಾರ ಅವರವ ಪಾಲಿಗೆ ಬಂದ ಆಸ್ತಿಗಳಲ್ಲಿ ಅವರು ಕಬ್ಜೆಯಲ್ಲಿ ಇದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವು ಪ್ರತಿವಾದಿ 3 ಮತ್ತು 4 ರವರ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ವಿವಾಹ ಯಾವತ್ತೂ ಆಗಿಲ್ಲ, ನನಗು ಮತ್ತು 1ನೇ ಪ್ರತಿವಾದಿಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ಕುಟುಂಬದ ನಡುವೆ ಇರುವ ಸಂಬಂಧದ ದುರುಪಯೋಗ ಪಡಿಸಿಕೊಂಡು 1ನೇ ಪ್ರತಿವಾದಿ ನನ್ನ ಗಂಡ ಎಂದು ಹೇಳಿ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

19. ನಾನು 1ನೇ ವಾದಿಯನ್ನು ಗರ್ಭಿಣಿ ಆದಾಗ ಪ್ರತಿವಾದಿಯರು ನನ್ನ ಸೀಮಂತ ಕಾರ್ಯಕ್ರಮ ಮಾಡಿಲ್ಲ ಕಾರಣ ನಾನು 04 ತಿಂಗಳ ಗರ್ಭಿಣಿ ಆದಾಗ ನನಗೆ ಹೊಡೆದು ಬಡೆದು ಮನೆಯಿಂದ ಹೊರಗೆ ಹಾಕಿ ರೂ.10,00,000/-

ವರದಕ್ಷಿಣೆ ತಂದಾಗ ಮಾತ್ರ ಸೀಮಂತ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿದ್ದರು. ನಮ್ಮ ಕುಟುಂಬದ ಮತ್ತು ಪ್ರತಿವಾದಿಯರ ಕುಟುಂಬದ ಸಂಬಂಧದ ದುರುಪಯೋಗ ಪಡಿಸಿಕೊಂಡು 1ನೇ ವಾದಿ ಹುಟ್ಟಿದಾಗ ತಂದೆಯ ಹೆಸರು ಮಲ್ಲಿಕಾರ್ಜುನ ಎಂದು ಸುಳ್ಳು ಮಾಹಿತಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಜನನ ಪ್ರಮಾಣ ಪತ್ರದ ದುರುಪಯೋಗ ಪಡಿಸಿಕೊಂಡು 1ನೇ ವಾದಿಯ ಆಧಾರ ಕಾರ್ಡನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

20. ನಮಗು ಮತ್ತು ಪ್ರತಿವಾದಿಯರಿಗು ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದವರು ಬಲ್ಯಾಢ್ಯರಿದ್ದುದ್ದರಿಂದ 3ನೇ ಪ್ರತಿವಾದಿನ್ನು ಹೊಡೆದು ಸರ್ವೆ ನಂ.15 ರ ಕಬ್ಜೆಯನ್ನು ತೆಗೆದುಕೊಂಡು ಸದರಿ ಜಮೀನನ್ನು ನನ್ನ ಅಣ್ಣ ತಮ್ಮಂದಿಯರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

21. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂದು ಹೇಳಿ ನಾನು, ನನ್ನ ಸಹೋದರರು, ನನ್ನ ದೊಡ್ಡಪ್ಪ ಚಿಕ್ಕಪ್ಪ ಎಲ್ಲರೂ ಸೇರಿ ಪ್ರತಿವಾದಿಯರ ಮೇಲೆ ಈ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲ ಪಾಲು ಕೊಡಿ ಎಂದು 2022 ರಲ್ಲಿ 3ನೇ ಪ್ರತಿವಾದಿಗೆ ಕೇಳಿದ್ದೆ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ